5.	ಎಂ.ಬಿ.ಪಾಟೀಲ್, ಕಾಲೇಜು ವಿದ್ಯಾರ್ಥಿನಿಲಯ, ಕಲಕೇರಿ ಮಂಡ್ಯ	25
6.	ಡಾ:ಬಿ.ಆರ್.ಅಂಬೇಡ್ಕರ್ ಪ.ಪೂರ್ವ ಕಾಲೇಜು ವಿ.ನಿ.ಶಿಡೇನೂರು	75
7.	ಮಾರುತಿ ವಿದ್ಯಾವರ್ಧಕ ಸಂಘ ಕಾಲೇಜು ವಿ.ನಿ. ಕೋಡ, ಹಿರೇಕೆರೂರು	75
8.	ನಾಯಕ ಕಾಲೇಜು ವಿ.ನಿಲಯ, ಸಪ್ತಾಪೂರ, ಧಾರವಾಡ	100
9.	ಯೋಗಿ ವೇಮನ ಪ.ಪೂ.ಕಾಲೇಜು ವಿ.ನಿ.ಬೆಳ್ಳಟ್ಟಿ	30
10.	ಟಿ.ಜಿ.ಇ.ಎಸ್. ಪ.ಪೂರ್ವ ಕಾಲೇಜು ವಿದ್ಯಾರ್ಥಿ ನಿಲಯ, ಮುದೆನೂರು	50
11.	ಡಾ:ಅಂಬೇಡ್ಕರ್ ಕಾಲೇಜು ವಿ.ನಿಲಯ, ಹಿರೇಕೆರೂರು	100
12.	ಬೋಗಾವಿ ಪೂ.ಪೂರ್ವ ಕಾಲೇಜು ವಿ.ನಿ. ಬೊಗಾವಿ, ಹಿರೇಕೆರೂರು ತಾ:	25

ವಿದ್ಯಾರ್ಥಿಗಳಿಗೆ ಒದಗಿಸಲಾಗುತ್ತಿರುವ ಸೌಲಭ್ಯಗಳು

1. ಮೆಟ್ರಿಕ್ ಪೂರ್ವ ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯಗಳಲ್ಲಿ ಪ್ರತಿ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳಿಗೆ ರೂ.250.00ರಂತೆ ಊಟದ ವೆಚ್ಚ, ಹಾಜರಾತಿಗೆ ಅನುಗುಣವಾಗಿ ಮಂಜೂರು ಮಾಡಲಾಗುತ್ತಿದೆ.

2. ಮೆಟ್ರಿಕ್ ನಂತರದ ಅನುದಾನ ಕಾಲೇಜು ವಿದ್ಯಾರ್ಥಿನಿಲಯಗಳಲ್ಲಿ ಪ್ರತಿ ವಿದ್ಯಾರ್ಥಿಗೆ ಪ್ರತಿ ತಿಂಗಳಿಗೆ ಭಾರತ ಸರ್ಕಾರದ ಶಿಷ್ಯ ವೇತನ ಮತ್ತು ಇ.ಬಿ.ಎಲ್. (ಹೆಚ್ಚುವರಿ ಊಟ) ಅನುದಾನ ಸೇರಿ ರೂ.300-00ಕ್ಕೆ ಮೀರದಂತೆ ಅನುದಾನವನ್ನು ನೀಡಲಾಗುವುದು.

ವಿಷಯ:- ಹುಬ್ಬಳ್ಳಿ - ಧಾರವಾಡ ಮಹಾನಗರಕ್ಕೆ ಪೂರ್ಣ ಒಳಚರಂಡಿ ವ್ಯವಸ್ಥೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 500 (671)

ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ - ಧಾರವಾಡ ಮಹಾನಗರದ ಶೇ:50ಕ್ಕಿಂತ ಹೆಚ್ಚಿನ ಭಾಗಕ್ಕೆ ಒಳಚರಂಡಿ ವ್ಯವಸ್ಥೆ ಇಲ್ಲದೆ ಜನರು ತೊಂದರೆ ಅನುಭವಿಸುತ್ತಿರುವುದು ಅನಾರೋಗ್ಯಕ್ಕೆ

ಈಡಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಪೂರ್ಣ ಮಹಾನಗರಕ್ಕೆ ಒಳಚರಂಡಿ ವ್ಯವಸ್ಥೆ ಅಳವಡಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಬಂದಿದೆ.

ಆ) ಉಳಿದ ಎಲ್ಲಾ ಭಾಗಗಳಿಗೂ ಒಳಚರಂಡಿ ಯೋಜನೆ ವ್ಯವಸ್ಥೆಯನ್ನು ಅಳವಡಿಸಲು 1988-89ನೇ ಸಾಲಿನಲ್ಲಿ ವಿಶ್ವ ಬ್ಯಾಂಕ್ ನೆರವಿಗಾಗಿ 5342 ಲಕ್ಷ ರೂ.ಗಳ ಅಂದಾಜನ್ನು ತಯಾರಿಸಲಾಗಿ ಅದಕ್ಕೆ ಹಣಕಾಸಿನ ಅಭಾವದಿಂದ ಸದರಿ ಯೋಜನೆಯನ್ನು ತೆಗೆದುಕೊಳ್ಳಲು ಮಂಜೂರಾತಿ ನೀಡಲು ಸಾಧ್ಯವಾಗಲಿಲ್ಲ. ಈಗ ಈ ಅಂದಾಜನ್ನು ಪರಿಷ್ಕರಿಸಿದಲ್ಲಿ ಈ ಯೋಜನೆಯ ಅಂದಾಜು ಸುಮಾರಾಗಿ 8400 ಲಕ್ಷ ರೂ.ಗಳಷ್ಟು ಆಗಬಹುದು. ಈ ಮೊತ್ತವು ಅಧಿಕವಾಗಿ ಇರುವುದರಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸಿದ ನಂತರ ಈ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕಾಗುತ್ತದೆ.

ವಿಷಯ:- ''ಗ್ರೇಟರ್ ಮಂಗಳೂರು'' ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 502 (1058)

ಶ್ರೀ ಕೆ.ಜಯರಾಮ್‌ಶೆಟ್ಟಿ, ಎಂಎಲ್‌ಎ (ಉಳ್ಳಾಲ):- ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ''ಗ್ರೇಟರ್ ಮಂಗಳೂರು'' ಪ್ರದೇಶದಲ್ಲಿ ಹೆಚ್ಚುವರಿಯಾಗಿ ಸೇರ್ಪಡೆಗೊಂಡ ಗ್ರಾಮಾಂತರ ಮತ್ತು ನಗರ ಪ್ರದೇಶಗಳಾವುವು?

2) ಹೆಚ್ಚುವರಿ ಪ್ರದೇಶಗಳಿಂದ ಈ ಮೊದಲೇ ಸ್ಥಳೀಯಾಡಳಿತ ಸಂಸ್ಥೆಗಳಿಗೆ ಪ್ರತಿನಿಧಿಯಾಗಿ ಆಯ್ಕೆಯಾಗಿರುವ ಜನಪ್ರತಿನಿಧಿಗಳು ಪ್ರತಿನಿಧಿತ್ವವನ್ನು ಕಳೆದುಕೊಳ್ಳುವರೇ?

3) ಗ್ರೇಟರ್ ಮಂಗಳೂರಿನ ರೂಪು ರೇಷೆಗಳೇನು? ಅಭಿವೃದ್ಧಿ ಕೆಲಸಗಳಲ್ಲಿ ಈ ಪ್ರದೇಶದ ಜನರು ಯಾವ ಸವಲತ್ತುಗಳನ್ನು ಹೆಚ್ಚುವರಿಯಾಗಿ ಪಡೆಯುವರು?

ಶ್ರೀ ಮಿರಾಜುದ್ದೀನ್ ಎನ್.ಪಟೇಲ್ (ಪೌರಾಡಳಿತ ಸಚಿವರು):-

1) ಹೊಸದಾಗಿ ರಚಿಸಲಾಗಿರುವ ಮಂಗಳೂರು ನಗರಪಾಲಿಕೆಗೆ ಈ ಕೆಳಕಂಡ ಪ್ರದೇಶಗಳು ಹೆಚ್ಚುವರಿಯಾಗಿ ಸೇರ್ಪಡೆಗೊಂಡಿವೆ.

1. ಬೆಂಗ್ರೆ (ಉತ್ತರ ಮರುಳುದಿಣ್ಣೆ)